ವಿಷಯ :– ಶ್ರೀ ರಾಮದೇವರ ನಾಲೆಯ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 513 (956)

ಡಾ. ನಂಜಪ್ಪ (ಶ್ರವಣ ಬೆಳಗೊಳ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಥಿಲವಾಗಿರುವ ಶ್ರೀ ರಾಮದೇವರ ನಾಲೆಯನ್ನು ದುರಸ್ತಿ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಯಾವಾಗ ಪ್ರಾರಂಭ ಮಾಡುತ್ತದೆ ?

ಆ) ಹೇಮಾವತಿ ಜಲಾಶಯದ ಪ್ರದೇಶದಲ್ಲಿರುವ ಕ್ಷೇತ್ರದಲ್ಲಿ ಚೌಗಿನಿಂದ ಸಾವಿರಾರು ತೆಂಗಿನ ಮರಗಳು ನಾಶವಾಗಿ ನೂರಾರು ಎಕರೆ ಜಮೀನು ಜಾಗು ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ, ಇದನ್ನು ಹೋಗಲಾಡಿಸುವ ಕ್ರಮಗಳೇನು ? ಇದರ ಪರಿಹಾರಕ್ಕೆ ಆ ಯೋಜನೆಯಲ್ಲಿಯೆ ಹಣ ಒದಗಿಸಲಾಗುವುದೇ ?

ಇ) ಶ್ರವಣಬೆಳಗೊಳ ಕ್ಷೇತ್ರದಲ್ಲಿ ಸುಮಾರು 10 ಗ್ರಾಮಗಳು (ಹೇಮಾವತಿ ಜಲಾನಯನದ ಅಡಿಯಲ್ಲಿ) ಜೌಗು ಪ್ರದೇಶವಾಗಿ, ವಾಸಕ್ಕೆ ಸಾಧ್ಯವಿಲ್ಲದೆ ಕಷ್ಟಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಆ ಗ್ರಾಮಗಳನ್ನು ಸ್ಥಳಾಂತರ ಮಾಡಲು ಕ್ರಮಗಳೇನು ? ಹಾಗೂ ಇದನ್ನು ಯಾವಾಗ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ವಿಶೇಷ ದುರಸ್ತಿ ಅಂದಾಜುಗಳು ತಯಾರು ಆಗಿದ್ದು, ಪ್ರಸ್ತುತ ಸಾಲಿನಲ್ಲಿ ಅನುದಾನ ಒದಗಿಸಲು ಸಾಧ್ಯವಾಗಿರುವುದಿಲ್ಲ. ವಿಶೇಷ ದುರಸ್ತಿ ಕೆಲಸಗಳಿಗೆ ದೊರೆಯಬಹುದಾದ ಅನುದಾನ ಹಾಗೂ ನಾಲೆಯಲ್ಲಿ ನೀರು ಬಿಡುವ ಕಾರ್ಯಕ್ರಮಗಳನ್ನು ಅನುಸರಿಸಿ ಕೆಲಸ ಕೈಗೊಳ್ಳಬೇಕಾಗುವುದು.

ಆ) ಆಚ್ಚುಕಟ್ಟು ಪ್ರದೇಶದ ತಗ್ಗಾಗಿರುವ ಹಲವೆಡೆ ಜೌಗಾಗಿರುವುದು ಗಮನಕ್ಕೆ ಬಂದಿದೆ. ಜೌಗಾಗಿರುವ ಜಮೀನುಗಳಿಗೆ ಕಾಡಾ ವತಿಯಿಂದ ಬಸಿ ಕಾಲುವೆ ತೋಡುವ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಹೇಮಾವತಿ ಯೋಜನೆಯಲ್ಲಿ ಈ ಕಾರ್ಯಕ್ರಮಕ್ಕಾಗಿ ಹಣವನ್ನು ಮೀಸಲಾಗಿಟ್ಟಿರುವುದಿಲ್ಲ.

ಇ) ಗಮನಕ್ಕೆ ಬಂದಿದೆ. 10 ಗ್ರಾಮಗಳ ಪೈಕಿ ನಾಲ್ಕು ಗ್ರಾಮಗಳನ್ನು ಪೂರ್ಣವಾಗಿ ಸ್ಥಳಾಂತರಿಸಲು ಉದ್ದೇಶಿಸಿದ್ದು, ಮೂರು ಗ್ರಾಮಗಳಿಗೆ ಪರಿಹಾರ ಕೊಡಲಾಗಿದೆ. ಮತ್ತು ಪುನರ್ ವಸತಿ ಕೆಲಸ ಅಂತಿಮ ಹಂತದಲ್ಲಿದೆ. ಮತ್ತೊಂದು ಗ್ರಾಮದ ಪುನ್ರಾವೆ ಪರಿಶೀಲನೆಯಲ್ಲಿದೆ. ಉಳಿದ ಆರು ಗ್ರಾಮಗಳಿಗೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಜೌಗಿನ ತೀವ್ರತೆಯ ಮೇಲೆ ಸಮಿತಿಯ ಶಿಫಾರಸ್ಸಿನಂತೆ ಸ್ಥಳಾಂತರಿಸುವುದು ಅಥವಾ ಪರಿಹಾರ ಕಾರ್ಯಕ್ರಮ ಕೈಗೊಳ್ಳಲಾಗುವುದು.

ವಿಷಯ :– ವಿದ್ಯುತ್‌ನ್ನು ಕಳ್ಳ ರೀತಿಯಲ್ಲಿ ಉಪಯೋಗಿಸುವವರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 514 (836)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1–4–89 ರಿಂದ 30–9–90ರ ವರೆವಿಗೆ ರೂ. 10 ಸಾವಿರಕ್ಕೂ ಅಧಿಕ ಮೌಲ್ಯದ ವಿದ್ಯುತ್ ಕಳ್ಳರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದ ಎಷ್ಟು ಪ್ರಕರಣಗಳು ವರದಿಯಾಗಿವೆ. (ಬೆಂಗಳೂರು, ಮೈಸೂರು ಮತ್ತು ತುಮಕೂರು ಜಿಲ್ಲೆಗಳು.)

ಆ) ಮೇಲ್ಕಂಡ ತಪ್ಪಿತಸ್ಥ ವ್ಯಕ್ತಿ, ಸಂಸ್ಥೆಯ ಹೆಸರು ಮತ್ತು ವಿಳಾಸಗಳೇನು ?

ಇ) ಮೇಲ್ಕಂಡವರ ವಿರುದ್ಧ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕೈಗೊಂಡ ಕಾನೂನು ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಬೆಂಗಳೂರು, ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ 1–4–89 ರಿಂದ 30–9–90ರ ವರೆಗೆ ರೂ. 10 ಸಾವಿರಕ್ಕೂ ಅಧಿಕ ಮೌಲ್ಯದ ವಿದ್ಯುತ್‌ನ್ನು ಕಳ್ಳರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದ 23 ಪ್ರಕರಣಗಳನ್ನು ಮತ್ತು 77 ಗುರುತಿಸಲಾಗದ ಅಪರಾಧದ (ನಾನ್ ಕಾಗ್ನೈಜೇಬಲ್) ಪ್ರಕರಣಗಳನ್ನು ಮಂಡಳಿಯು ಪತ್ತೆ ಹಚ್ಚಿದೆ.